ಸಿಸಿ ನಂ. 2589/2023
ಸಿ.ಡಬ್ಲೂ-14 ಪಿ.ಡಬ್ಲೂ: 8

ದಿನಾಂಕ 12-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲು ಶ್ರೀ.B.S.U. ಆರೋಪಿ ಪರ ವಕೀಲರಿಂದ**

ಆರೋಪಿಯ ಬೈಕ್ ಗೆ ಶ್ರೀಶೈಲ್ ಎನ್ನುವವರು ಡಿಕ್ಕಿ ಪಡಿಸಿದ್ದಕ್ಕೆ ಆರೋಪಿಯು ದೂರನ್ನು ನೀಡಿದ್ದರು ಎಂದರೆ ಸರಿಯಲ್ಲ. ಆರೋಪಿಯು ಯಾವುದೇ ತಪ್ಪನ್ನು ಮಾಡದಿದ್ದರು ಸುಳ್ಳು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಶಿವಾನಂದ ನಾಟಿಕಾರ ರವರು ಗಾಯಾಳುಗಳಾದ ಚಾಸಾ 4 ಮತ್ತು 5 ರವರನ್ನು ಚಿಕಿತ್ಸೆಗೆ ಕರೆದುಕೊಂಡು ಹೊದ ಬಗ್ಗೆ ಶಿವಾನಂದ ನಾಟಿಕಾರ ರವರ ವಿಚಾರಣೆಯನ್ನು ಮಾಡಿ ನಾನು ಹೇಳಿಕೆಯನ್ನು ಪಡೆದಿಲ್ಲ ಎಮದರೆ ಸರಿಯಲ್ಲ. ಚಾಸಾ 1 ರಿಂದ 8 ರವರ ಹೇಕೆಯನ್ನು ನಾನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಪಿರ್ಯಾದಿದರರಿಗೆ ಅನುಕೂಲವಾಗಿಲಿ ಎಂದು ಒಂದು ಸುಳ್ಳು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ಆರೋಪಿಯು ಅಪಘಾತದಲ್ಲಿ ಗಾಯಗೊಂಡು ಜೈಸಿಂಗಪುರ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದರು ಎಂದರೆ ಸರಿ. ಈ ಪ್ರಕರಣದ ಆರೋಪಿಯು ಗಾಯಗೊಂಡಿರುವ ಅಪಘಾತವು ಶ್ರೀಶೈಲ ಎನ್ನುವವರ ತಪ್ಪಿನಿಂದ ಆಗಿರುವ ಅಪಘಾತವಾಗಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ಅಪಘಾತದಲ್ಲಿ ಈ ಪ್ರಕರಣದ ಆರೋಪಿ ಸಚಿನ ಮತ್ತು ಶ್ರೀಶೈಲ ಎನ್ನುವವರಿಗೆ ಗಾಯವಾಗಿತ್ತು ಎಂದು ನುಡಿಯುತ್ತಾರೆ. ಶ್ರೀಶೈಲ್ ರವರು ತನಗೆ ಸೇರಿದ ಬೈಕ್ ನಂ.

ಕೆ.ಎ. 21/ಎಕ್ಸ -2761 ನ್ನು ಅತೀ ವೇಗ ಮತ್ತು ಅಜಾಗ್ರುಕತೆಯಿಂದ ಚಾಲನೆ ಮಾಡಿದ್ದರಿಂದ ಸದರಿ ಅಪಘಾತವಾಗಿತ್ತು ಎಂದರೆ ಸರಿ. ಆರೋಪಿಯ ತಪ್ಪಿನಿಂದ ಈ ಅಪಘಾತವು ಸಂಭವಿಸಿದ್ದಿದ್ದರು ಚಾಸಾ 1 ರವರ ಮಾತು ಕೇಳಿ ಸುಳ್ಳು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೆ.ಕೆ.ಸರಿ. ಅದೇ**

ಹಿರಿಯ ಸಿವ್ಹಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಸಿಂದಗಿ